ವಟವಿಟಪಿಸಮೀಪೇ ಭೂಮಿಭಾಗೇ ನಿಷಣ್ಣಂ
ಸಕಲಮುನಿಜನಾನಾಂ ಜ್ಞಾನದಾತಾರಮಾರಾತ್ ।
ತ್ರಿಭುವನಗುರುಮೀಶಂ ದಕ್ಷಿಣಾಮೂರ್ತಿದೇವಂ
ಜನನಮರಣದುಃಖಚ್ಛೇದದಕ್ಷಂ ನಮಾಮಿ ॥

ವಟವೃಕ್ಷದ ಸಮೀಪದಲ್ಲಿ ಕುಳಿತು ಸಕಲ ಮುನಿಗಳಿಗೂ ಸಾಕ್ಷಾತ್ತಾಗಿ ಜ್ಞಾನವನ್ನು ದಾನಮಾಡುತ್ತಿರುವವನೂ, ಮೂರು ಲೋಕಗಳಿಗೂ ಗುರುವೂ, ಈಶ್ವರನೂ, ಜನನ ಮರಣರೂಪವಾದ ದುಃಖವನ್ನು ನಾಶಮಾಡುವುದರಲ್ಲಿ ದಕ್ಷನೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಿಸುತ್ತೇನೆ.

ಓಂ ನಮಃ ಪ್ರಣವಾರ್ಥಾಯ
ಶುದ್ಧಜ್ಞಾನೈಕಮೂರ್ತಯೇ ।
ನಿರ್ಮಲಾಯ ಪ್ರಶಾಂತಾಯ
ದಕ್ಷಿಣಾಮೂರ್ತಯೇ ನಮಃ ॥

ಪ್ರಣವದ ವಾಚ್ಯನೂ, ಶುದ್ಧಜ್ಞಾನದ ಮೂರ್ತಿಯೂ, ನಿರ್ಮಲನೂ, ಪ್ರಶಾಂತನೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ನಿಧಯೇ ಸರ್ವವಿದ್ಯಾನಾಂ
ಭಿಷಜೇ ಭವರೋಗಿಣಾಮ್ ।
ಗುರವೇ ಸರ್ವಲೋಕಾನಾಂ
ದಕ್ಷಿಣಾಮೂರ್ತಯೇ ನಮಃ ॥

ಸಮಸ್ತ ವಿದ್ಯೆಗಳಿಗೆ ಆಗರವೂ, ಭವರೋಗಕ್ಕೆ ವೈದ್ಯನೂ, ಸಮಸ್ತ ಲೋಕಕ್ಕೆ ಗುರುವೂ ಆದ ಶ್ರೀದಕ್ಷಿಣಾಮೂರ್ತಿಗೆ ನಮಸ್ಕಾರ.

ಮೌನವ್ಯಾಖ್ಯಾಪ್ರಕಟಿತಪರಬ್ರಹ್ಮತತ್ತ್ವಂ ಯುವಾನಂ
ವರ್ಷಿಷ್ಠಾಂತೇವಸದೃಷಿಗಣೈರಾವೃತಂ ಬ್ರಹ್ಮನಿಷ್ಠೈಃ ।
ಆಚಾರ್ಯೇಂದ್ರಂ ಕರಕಲಿತಚಿನ್ಮುದ್ರಮಾನಂದರೂಪಂ
ಸ್ವಾತ್ಮಾರಾಮಂ ಮುದಿತವದನಂ
ದಕ್ಷಿಣಾಮೂರ್ತಿಮೀಡೇ ॥

ಬ್ರಹ್ಮಜ್ಞಾನವನ್ನು ಮೌನದಿಂದಲೇ ಬೋಧಿಸುವವನೂ, ಯುವಕನೂ, ಬ್ರಹ್ಮನಿಷ್ಠರೂ ವೃದ್ಧರೂ ಆದ ಮಹರ್ಷಿಗಳಿಂದ ಸುತ್ತುವರೆದ ಆಚಾರ್ಯೇಂದ್ರನೂ, ಚಿನ್ಮುದ್ರೆಯಿಂದ ಕೂಡಿದ ಹಸ್ತವುಳ್ಳವನೂ, ಆನಂದಸ್ವರೂಪನೂ, ಆತ್ಮಾರಾಮನೂ, ಸಂತೋಷದ ಮುಖವುಳ್ಳವನೂ ಆದ ಶ್ರೀದಕ್ಷಿಣಾಮೂರ್ತಿಯನ್ನು ಸ್ತುತಿಸುತ್ತೇನೆ.

(ಶ್ರೀಶಂಕರಾಚಾರ್ಯರ 'ದಕ್ಷಿಣಾಮೂರ್ತಿ ಸ್ತೋತ್ರ' ದಿಂದ)

# ನಿಜವಾದ ಗುರು ಯಾರು?

ಸತ್ಯದ ಪರಂಜ್ಯೋತಿಯಿಂದ ಯಾರು ಪರಿಶುದ್ಧಾತ್ಮರಾಗಿರುವರೋ ಅವರೇ ನಿಜವಾದ ಗುರುಗಳು.

ಹೇಗೆ ಹಲವು ಮಂದಿ ಮಂಜಿನ ಗಡ್ಡೆಯನ್ನು ಕೇಳಿರುವರೊ ಆದರೆ ನೋಡಿಲ್ಲವೊ, ಹಾಗೆಯೇ ಹಲವು ಧರ್ಮಪ್ರಚಾರಕರು ದೇವರ ಗುಣಗಳ ವಿಷಯವಾಗಿ ಪುಸ್ತಕದಲ್ಲಿ ಓದಿರುವರು. ಆದರೆ ಪ್ರತ್ಯಕ್ಷವಾಗಿ ಅದನ್ನು ಕಂಡಿಲ್ಲ. ಹಲವರು ಮಂಜಿನಗಡ್ಡೆಯನ್ನು ನೋಡಿರುವರು. ಆದರೆ ಅದರ ರುಚಿಯನ್ನು ಅರಿಯರು. ಅದರಂತೆಯೇ ಹಲವರಿಗೆ ಪರಮಾತ್ಮನ ಮಹಿಮೆಯ ಕ್ಷಣಿಕ ದೃಶ್ಯ ಲಭಿಸಿರಬಹುದು. ಆದರೆ ಅದರ ಸತ್ಯಾಂಶವನ್ನು ತಿಳಿದುಕೊಂಡಿಲ್ಲ. ಯಾರು ಮಂಜಿನಗಡ್ಡೆಯನ್ನು ತಿಂದಿರುವರೋ ಅವರು ಮಾತ್ರ ಅದು ಹೇಗಿದೆ ಎಂಬುದನ್ನು ಹೇಳಬಹುದು. ಹಾಗೆಯೇ ಯಾರು ದೇವರೊಂದಿಗೆ ಹಲವು ಭಾವಗಳಲ್ಲಿ, ಅಂದರೆ ದಾಸನಂತೆ, ಸ್ನೇಹಿತನಂತೆ, ಪ್ರೇಮಿಯಂತೆ ಆತನಲ್ಲಿ ತನ್ಮಯನಾಗಿ ಐಕ್ಯನಾಗಿದ್ದಾನೆಯೋ ಅವನು ಮಾತ್ರ ದೇವರ ಮಹಿಮೆಯನ್ನು ಹೇಳಬಲ್ಲ.

ತಂಗಾಳಿಯು ಬೀಸಿ ಪೂರ್ಣ ವಿಕಸಿತವಾದ ಹೂವಿನ ಪರಿಮಳವನ್ನು ದಿಕ್ಕುದಿಕ್ಕಿಗೆ ಎರಚಿದಾಗ ದುಂಬಿಗಳು ತಮಗೆ ತಾವೇ ಬರುವುವು. ಸಿಹಿ ಪದಾರ್ಥಗಳು ಇರುವ ಸ್ಥಳಕ್ಕೆ ಇರುವೆಗಳನ್ನು ಯಾರೂ ಕರೆಯಬೇಕಾಗಿಲ್ಲ. ಇದರಂತೆಯೇ ಯಾವಾಗ ಒಬ್ಬನು ಪರಿಶುದ್ಧನಾಗಿ ಪರಿಪೂರ್ಣನಾಗುವನೋ ಆಗ ಅವನಲ್ಲಿರುವ ಮಂಗಳ ಗುಣಗಳ ಮಾಧುರ್ಯ ಸುತ್ತಲೂ ಹಬ್ಬುವುದು. ಸತ್ಯಾನ್ವೇಷಕರೆಲ್ಲ ಸಹಜವಾಗಿಯೇ ಅವನ ಹತ್ತಿರಕ್ಕೆ ಬರುವರು. ತಾನು ಮಾತನಾಡುವುದನ್ನು ಕೇಳುವುದಕ್ಕಾಗಿ ಶ್ರೋತೃಗಳ ಸಂದಣಿಯನ್ನು ಅವನು ಹುಡುಕಿಕೊಂಡು ಹೋಗಬೇಕಾಗಿಲ್ಲ.

ನಿಜವಾದ ಬೋಧನೆ ಎಂದರೇನು? ಇನ್ನೊಬ್ಬರಿಗೆ ಬೋಧೆ ಮಾಡುವುದಕ್ಕಿಂತಲೂ ಒಬ್ಬನು ಸದಾ ದೇವರನ್ನು ಪೂಜಿಸುತ್ತಿದ್ದರೆ ಅದೇ ಸಾಕಾದಷ್ಟು ಬೋಧನೆ. ಜನನಮರಣಗಳಿಂದ ಯಾರು ಬಿಡುಗಡೆ ಹೊಂದಬೇಕೆಂದು ಪ್ರಯತ್ನಿಸುವರೋ ಅವರೇ ನಿಜವಾದ ಬೋಧಕರು. ಯಾರು ಮುಕ್ತರೋ ಅವರ ಸಮೀಪಕ್ಕೆ ಎಷ್ಟೋ ಕಡೆಗಳಿಂದ ನೂರಾರು ಜನರು ಕಾತರರಾಗಿ ಬರುವರು.

– ಶ್ರೀರಾಮಕೃಷ್ಣ

'ವಿವೇಕಪ್ರಭ' ಪತ್ರಿಕೆಯ ವತಿಯಿಂದ

# ಶ್ರೀರಾಮಕೃಷ್ಣ ಭಕ್ತ ಸಮಾವೇಶ – 2010

**23.10.2010 ಮತ್ತು 24.10.2010 ; ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಮೈಸೂರು**

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳು ಆಧುನಿಕ ಯುಗದ ಆಧ್ಯಾತ್ಮಿಕ ಜ್ಯೋತಿಗಳಾಗಿವೆ; ಈಗಿನ ಕಾಲದ ಯಾಂತ್ರಿಕ ಜೀವನಕ್ಕೆ ಜೀವಸಂಜೀವಿನಿಗಳಾಗಿವೆ. ಕಷ್ಟಕಾರ್ಪಣ್ಯಗಳಿಂದ ನೊಂದ ಮನಸ್ಸಿಗೆ ಸಾಂತ್ವನವನ್ನೂ, ಧೈರ್ಯವನ್ನೂ, ಆತ್ಮವಿಶ್ವಾಸವನ್ನೂ ನೀಡುವ ಈ ಉದಾತ್ತ ಚಿಂತನೆಗಳನ್ನು ಭಕ್ತರು ಒಟ್ಟಾರೆ ಸೇರಿ ಮನನ ಮಾಡುವ ಆವಶ್ಯಕತೆ ಇದೆ. ಆ ಸುಸಂದರ್ಭ ಈಗ ಒದಗಿಬಂದಿದ್ದು, ಈ ಉದ್ದೇಶಕ್ಕಾಗಿಯೇ ವಿವೇಕಪ್ರಭ ಪತ್ರಿಕೆಯ ವತಿಯಿಂದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ **'ಶ್ರೀರಾಮಕೃಷ್ಣ ಭಕ್ತ ಸಮಾವೇಶ – 2010'** ಅನ್ನು ಆಯೋಜಿಸಲಾಗಿದೆ.

ಎರಡು ದಿನಗಳ ಈ ಸಮಾವೇಶದಲ್ಲಿ **ದಿವ್ಯತ್ರಯರ ಜೀವನ–ಸಂದೇಶಗಳ ಆಲೋಚನೆ, ಧ್ಯಾನದ ಆಚರಣೆಯ ಬಗ್ಗೆ ಅರಿವು, ದೈನಂದಿನ ಜೀವನದಲ್ಲಿ ಸೇವೆಯನ್ನು ಅಳವಡಿಸಿಕೊಳ್ಳುವುದು ಹೇಗೆ?** – ಈ ವಿಷಯಗಳ ಬಗ್ಗೆ ರಾಮಕೃಷ್ಣ ಮಹಾಸಂಘದ ಹಿರಿಯ ಯತಿಗಳು ಮಾರ್ಗದರ್ಶನ ಮಾಡುವರು. ಹಾಗೆಯೇ ನಾಡಿನ ಸುಪ್ರಸಿದ್ಧ ಭಾಷಣಕಾರರಾದ ಬೇಲಿ ಮಠದ ಶ್ರೀಶಿವಾನುಭವ ಚರಮೂರ್ತಿ ಪರಮಪೂಜ್ಯ ಶ್ರೀಶಿವರುದ್ರ ಮಹಾಸ್ವಾಮಿಗಳು ಮತ್ತು ಶ್ರೀ ಹಿರೇಮಗಳೂರು ಕಣ್ಣನ್ ಅವರಿಂದ ಉದ್ಬೋಧಕ ಪ್ರವಚನಗಳು ಮತ್ತು ಸಂಸ್ಕೃತ ಗ್ರಾಮ ಮತ್ತೂರಿನ ಶ್ರೀಮಾರ್ಕಂಡೇಯ ಅವಧಾನಿ ಮತ್ತು ಶ್ರೀ ಕುಮಾರಸ್ವಾಮಿ ಅವರಿಂದ 'ಕುಮಾರವ್ಯಾಸ ಭಾರತ ಕಾವ್ಯವಾಚನ, ವ್ಯಾಖ್ಯಾನ' – ಇವುಗಳನ್ನೂ ಏರ್ಪಡಿಸಲಾಗಿದೆ. ಅದಲ್ಲದೆ ಪ್ರಸಿದ್ಧ ಗಾಯಕರಿಂದ ದೈನಂದಿನ ಭಜನೆಯ ಜೊತೆಗೆ, ಭಾಷಣಗಳ ಮಧ್ಯೆ 'ನಾಮಸಂಕೀರ್ತನೆ' ಕಾರ್ಯಕ್ರಮವೂ ಇರುತ್ತದೆ. ಈ ಸಮಾವೇಶದಲ್ಲಿ ರಾಮಕೃಷ್ಣ ಮಹಾಸಂಘವು ಕರ್ನಾಟಕದಲ್ಲಿ ಹೊರತರುತ್ತಿರುವ ಏಕೈಕ ಪತ್ರಿಕೆಯಾದ 'ವಿವೇಕಪ್ರಭ'ದ ಪ್ರಚಾರದ ಬಗ್ಗೆಯೂ ಸಮಾಲೋಚನೆ ನಡೆಯುವುದು.

ಆಶ್ರಮಕ್ಕೆ ಅತಿ ಹತ್ತಿರವಿರುವ ಎರಡು ಸುಸಜ್ಜಿತ ಕಲ್ಯಾಣ ಮಂಟಪಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದ್ದು, ಎಲ್ಲ ರೀತಿಯಲ್ಲಿಯೂ ವಾಸ್ತವ್ಯ ಸುಖಕರವಾಗಿರುವುದಕ್ಕೆ ಏರ್ಪಾಡು ಮಾಡಲಾಗಿದೆ. ಉತ್ತಮ ಗುಣಮಟ್ಟದ ಪ್ರಸಾದ ವ್ಯವಸ್ಥೆಗೂ ಸಿದ್ಧತೆಗಳು ಭರದಿಂದ ಸಾಗಿವೆ. ಸಮರ್ಪಣಾಭಾವದ ಸ್ವಯಂಸೇವಕರು ಬರುವ ಭಕ್ತರಿಗೆ ಎಲ್ಲ ರೀತಿಯ ಸೌಲಭ್ಯವನ್ನೂ ಸಹಕಾರವನ್ನೂ ನೀಡುವುದಕ್ಕೆ ಸದಾ ಸನ್ನದ್ಧರಾಗಿ ಇರುತ್ತಾರೆ.

1. **ಕಾಣಿಕೆ : ರೂ.350/– ಮಾತ್ರ**
2. **ಶಿಬಿರಾರ್ಥಿಗಳು 22.10.2010 ರ ಸಾಯಂಕಾಲ 6 ಗಂಟೆಯ ಮೇಲೆ ಬರಬೇಕು ಮತ್ತು 24.10.2010 ರಂದು, ಸಂಜೆ 6.30 ರ ನಂತರ ತೆರಳಬೇಕಾಗುತ್ತದೆ.**
3. **ಆಸಕ್ತರು, ಭಾಗವಹಿಸುವ ಪ್ರತಿ ವ್ಯಕ್ತಿಗೆ ರೂ.350/– ಅನ್ನು ಡಿ.ಡಿ. ಕಳುಹಿಸಿ ನೋಂದಾಯಿಸಿಕೊಳ್ಳಬಹುದು. ಅವರಿಗೆ 10 ರಸೀದಿಗಳು ಇರುವ ಒಂದು ರಸೀದಿಪುಸ್ತಕವನ್ನು ಕಳಿಸಲಾಗುವುದು. ಅವರು ಆಗಸ್ಟ್ 30 ರ ಒಳಗೆ ವಿವೇಕಪ್ರಭ ಚಂದಾ ಮಾಡಿಸಲು ಪ್ರಯತ್ನಿಸಬೇಕು. ಆಗಸ್ಟ್ 30 ರ ನಂತರ ಚಂದಾಹಣವನ್ನು ಕಳುಹಿಸಿದರೆ, ತಮಗೆ ಸೂಚನಾಪತ್ರವನ್ನು ಅಂಚೆಯ ಮೂಲಕ ಕಳಿಸಲಾಗುವುದು. ಅದು ಸಾಧ್ಯವಾಗದಿದ್ದರೂ, ಆದ್ಯತೆಯ ಪ್ರಕಾರ ನಿಮಗೆ ಶಿಬಿರಕ್ಕೆ ಬರಬೇಕಾದ ಸೂಚನೆಯನ್ನು ತಲುಪಿಸಲಾಗುವುದು. 'ವಿವೇಕಪ್ರಭ' ಚಂದಾ ಮಾಡಿಸುವುದನ್ನು ಈ ಸಮಾವೇಶಕ್ಕೆ ಆದ್ಯತೆಯೆಂದು ಪರಿಗಣಿಸಲಾಗುವುದೇ ಹೊರತು ಇದು ನಿರ್ಬಂಧವಲ್ಲ.**
4. **ಕೇವಲ 350 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿರುವುದರಿಂದ ಒಡನೇ ಹಣ ಕಳುಹಿಸಿ, ನೋಂದಾಯಿಸಿಕೊಳ್ಳಿ.**
5. **ಹಣವನ್ನು ಕೇವಲ ಡಿ.ಡಿ. ಮೂಲಕ 'Sri Ramakrishna Ashrama, Viveka prabha A/c' ಹೆಸರಿಗೆ ಕಳಿಸಬೇಕು. ಲಕೋಟೆಯ ಮೇಲೆ "ವಿವೇಕಪ್ರಭ ಭಕ್ತ ಸಮಾವೇಶ – 2010' ಎಂದು ನಮೂದಿಸಿರಬೇಕು.**
6. **ಪತ್ರದಲ್ಲಿ ಹೆಸರು, ವಿಳಾಸ, ಫೋನ್ ನಂಬರ್, ಇ–ಮೈಲ್ ವಿಳಾಸ, ವಯಸ್ಸುಗಳನ್ನು ನಮೂದಿಸಬೇಕು. ಒಂದೇ ಪತ್ರದಲ್ಲಿ ಎಷ್ಟು ಜನರನ್ನು ಬೇಕಾದರೂ ನಮೂದಿಸಬಹುದು.**
7. **ದೀರ್ಘಕಾಲದ ಕಾಯಿಲೆಗಳಿಂದ ನರಳುತ್ತಿರುವವರು ಭಾಗವಹಿಸದಿರುವುದು ಒಳ್ಳೆಯದು.**
8. **ಡಿ.ಡಿ. ಮತ್ತು ಪತ್ರವನ್ನು ಕಳಿಸಬೇಕಾದ ವಿಳಾಸ : 'ವಿವೇಕಪ್ರಭ ಭಕ್ತ ಸಮಾವೇಶ – 2010', ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು – 570 020**

ಸಂಪಾದಕೀಯ

# "ಸ್ಮರಣೆ ಒಂದೇ ಸಾಲದೆ ಗೋವಿಂದನ"

## (*ಭಗವದ್ಗೀತೆಯ ಬೋಧನೆ*)

**ತಮೇವೈಕಂ ಜಾನಥ ಆತ್ಮಾನಮ್**
**ಅನ್ಯಾ ವಾಚೋ ವಿಮುಂಚಥ ಅಮೃತಸ್ಯ ಸೇತುಃ**
(*ಮುಂಡಕೋಪನಿಷತ್, ೨:೨:೫*)

"ಆ ಆತ್ಮನೊಬ್ಬನನ್ನೇ ತಿಳಿದುಕೊಳ್ಳಿರಿ, ಬೇರೆ ಮಾತುಗಳನ್ನು ಬಿಡಿರಿ. ಇದು ಅಮೃತಕ್ಕೆ ಸೇತು."


ರಷ್ಯಾ ದೇಶ. ಅವನೊಬ್ಬ ಅಲೆಮಾರಿ. ಬಗಲಲ್ಲಿ ಒಂದು ಚೀಲ, ಒಣಗಿದ ರೊಟ್ಟಿ ತುಂಡುಗಳು ಮತ್ತು ಬೈಬಲ್‌ನ ಪುಸ್ತಕ – ಇಷ್ಟೇ ಅವನ ಆಸ್ತಿ. ಅವತ್ತು ಭಾನುವಾರ. ಉತ್ಸವ ಬೇರೆ. ಪ್ರಾರ್ಥಿಸಲು ಅವನು ಚರ್ಚಿಗೆ ಹೋದ. ಬೈಬಲ್‌ನ ಪಠಣವಾಯಿತು. ಅಂದು ಅವನ ಗಮನ ಸೆಳೆದದ್ದು ಬೈಬಲ್ಲಿನಲ್ಲಿ ಬರುವ ಸಂತ ಪೌಲನ ಈ ಮಾತುಗಳು – **"ಎಡೆಬಿಡದೆ ಪ್ರಾರ್ಥಿಸು."**

ಅವನೊಬ್ಬ ಸಾಧಕ. ಸಂತ ಪೌಲನ ಮಾತು ಅವನನ್ನು ಆಕರ್ಷಿಸಿತು. "ಮಾನವನಿಗೆ ಅನೇಕ ಚಿಂತೆಗಳು. ಅವನು ಬದುಕುವುದಕ್ಕೆ ಮಾಡಬೇಕಾದ ಕೆಲಸಗಳೇ ಬೇಕಾದಷ್ಟು. ನಿರಂತರ ಪ್ರಾರ್ಥನೆ ಅವನಿಂದ ಸಾಧ್ಯವೇ? ಇದನ್ನು ನನಗೆ ವಿವರಿಸುವವರು ಯಾರು?" ಹೀಗೆ ಆಲೋಚಿಸಿದ ಆ ಅಲೆಮಾರಿ ಸಾಧಕ, ನಾಡಿನ ಉದ್ದಗಲಗಳಲ್ಲಿ ಇದ್ದ ಪ್ರಾರ್ಥನಾಮಂದಿರಗಳಿಗೆಲ್ಲ ಹೋದ. ಅಲ್ಲಿ ನಡೆಯುತ್ತಿದ್ದ ಪ್ರವಚನಗಳನ್ನೆಲ್ಲ ಕೇಳಿದ. ಆದರೂ ಅವನ ಪ್ರಶ್ನೆಗೆ ಉತ್ತರ ಸಿಕ್ಕಲೇ ಇಲ್ಲ.

ಕಡೆಗೆ ಬೇಸತ್ತು, ಪ್ರವಚನಗಳನ್ನು ಕೇಳುವುದನ್ನು ನಿಲ್ಲಿಸಿದ. "ಭಗವಂತನ ಸಹಾಯ ಇದಕ್ಕೆ ದೊರಕುತ್ತದೆ. ನಿರಂತರ ಪ್ರಾರ್ಥನೆಯಲ್ಲಿ ಪರಿಣತನಾದವರು ಯಾರಾದರೂ ನನಗೆ ಮಾರ್ಗದರ್ಶನ ಮಾಡುತ್ತಾರೆ" ಎಂದು ಸಂಕಲ್ಪಮಾಡಿದ. ಅಂಥವರನ್ನು ಹುಡುಕಿಕೊಂಡು ಅಲೆಯಲಾರಂಭಿಸಿದ. ಅವನ ಅನ್ವೇಷಣೆಯು ಕಡೆಗೂ ಫಲಕೊಟ್ಟಿತು. ಅವನು ನಿರಂತರ ಪ್ರಾರ್ಥನೆಯಲ್ಲಿ ತನ್ನನ್ನು ತೊಡಗಿಸಿಕೊಂಡ. ಆ ಮೂಲಕ ಧನ್ಯನಾದ. ಇಂದಿಗೂ ಅವನು ಅಜ್ಞಾತನಾಗಿಯೇ ಇದ್ದಾನೆ. ಆದರೆ ಅವನ ಆತ್ಮಚರಿತ್ರೆ ಸಹಸ್ರಾರು ಸಾಧಕರಿಗೆ ದಾರಿದೀಪವಾಗಿದೆ. ಅದರ ಹೆಸರು *The Way of a Pilgrim*. ರಷ್ಯಾ ದೇಶದ ಆ ಮಹಾತ್ಮನ ಸಮಸ್ಯೆ ನಮಗೂ ಕಾಡುವುದುಂಟು. ಮಿಕ್ಕೆಲ್ಲ ಕೆಲಸಕಾರ್ಯಗಳ ನಡುವೆ ಭಗವಚ್ಚಿಂತನೆ ಸಾಧ್ಯವೇ?

### ಮಾಮ್ ಅನುಸ್ಮರ

ಭಗವದ್ಗೀತೆಯನ್ನು ಶ್ರೀಕೃಷ್ಣನು ಉಪದೇಶಿಸುವುದು ಕಾಡಿನಲ್ಲಿ ಅಲ್ಲ, ರಣರಂಗದಲ್ಲಿ. ಅರ್ಜುನ ಯುದ್ಧ ಮಾಡಬೇಕಾಗಿದೆ. ಅದಕ್ಕಾಗಿ ತನ್ನ ಮನಸ್ಸನ್ನೆಲ್ಲ ಏಕಾಗ್ರಗೊಳಿಸಬೇಕಾಗಿದೆ. ಆದರೂ ಕೃಷ್ಣ ಹೀಗೆ ಹೇಳುತ್ತಾನೆ: **ತಸ್ಮಾತ್ ಸರ್ವೇಷು ಕಾಲೇಷು ಮಾಮ್ ಅನುಸ್ಮರ ಯುದ್ಧ್ಯ ಚ** – "ಯಾವಾಗಲೂ ನನ್ನನ್ನು ಸ್ಮರಣೆ


ರಷ್ಯಾದೇಶದ ಅಜ್ಞಾತ ಮಹಾತ್ಮ

ಮಾಡುತ್ತಲೇ ಯುದ್ಧ ಮಾಡು" (*ಭಗವದ್ಗೀತೆ, ೮–೭*). ಇಲ್ಲಿ 'ಯುದ್ಧ' ಎನ್ನುವುದು ಅರ್ಜುನನ ಕರ್ತವ್ಯ. ಭಗವಂತನ ಸ್ಮರಣೆ ಮಾಡುತ್ತಲೇ ನಮ್ಮ ಕರ್ತವ್ಯಗಳನ್ನು ಮಾಡಬೇಕು ಎಂದು ಇದರ ಅರ್ಥ. ಇದು ಸಾಧ್ಯವೇ?

ಇದಕ್ಕಾಗಿ ನಾವು ನಮ್ಮ ಕೆಲಸಕಾರ್ಯಗಳನ್ನು ಯಾವ ಮನೋಭಾವದಿಂದ ಮಾಡಬೇಕು ಎನ್ನುವುದನ್ನು ಕಲಿತುಕೊಳ್ಳಬೇಕು. ಆಗ ಅಂತರಂಗದಲ್ಲಿ ಭಗವಚ್ಚಿಂತನೆ ಅನವರತವೂ ನಡೆಯುತ್ತಿರುತ್ತದೆ; ಬಾಹ್ಯದಲ್ಲಿ ನಮ್ಮ ಕೆಲಸಕಾರ್ಯಗಳೂ ಜರುಗುತ್ತಿರುತ್ತವೆ. ಸಮುದ್ರದ ಮೇಲುಗಡೆ ಲಕ್ಷಾಂತರ ಅಲೆಗಳು ಏಳುತ್ತಲೇ ಇರುತ್ತವೆ. ಆದರೆ ಅವುಗಳ ಹಿನ್ನೆಲೆಯಲ್ಲಿನ ಸಮುದ್ರ ಶಾಂತವಾಗಿಯೇ ಇರುತ್ತದೆ. ಈ ಶಾಂತ ಮನಃಸ್ಥಿತಿಯನ್ನೇ ಕೃಷ್ಣನು **'ಅಸಕ್ತಬುದ್ಧಿ'** ಎಂದು ಕರೆಯುತ್ತಾನೆ. **ತಸ್ಮಾದ್ ಅಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ,** "ಯಾವಾಗಲೂ ಅಸಕ್ತನಾಗಿದ್ದುಕೊಂಡು ಕರ್ಮ ಮಾಡು."

### ಅಭ್ಯಾಸಯೋಗ

ಅಸಕ್ತಬುದ್ಧಿಯನ್ನು ಬೆಳೆಸಿಕೊಳ್ಳುವುದು ಹೇಗೆ? ಇದಕ್ಕೆ ಶ್ರೀಕೃಷ್ಣನ ಪರಿಹಾರ 'ಅಭ್ಯಾಸಯೋಗ' ದಿಂದ ಎಂದು.

**ಅಭ್ಯಾಸಯೋಗಯುಕ್ತೇನ ಚೇತಸಾ ನಾನ್ಯಗಾಮಿನಾ ।**
**ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನುಚಿಂತಯನ್ ॥**
(೮–೮)